ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

1. 4 ನಗರ : ಪಟ್ಟಣಗಳು ಮೈಸೂರು, ತುಮಕೂರು, ಚನ್ನಪಟ್ಟಣ ಮತ್ತು ರಾಮನಗರಂ ಯೋಜನೆಯ ವೆಚ್ಚ ರೂ. 481.60 ಕೋಟಿಗಳು

2. ಜೂನ್ 2002

3. ಒಪ್ಪಿಕೊಂಡ ಅವಧಿಯಲ್ಲಿ ಪೂರ್ಣಗೊಳ್ಳದ ಕಾಮಗಾರಿಗಳ ಬಗ್ಗೆ ಮಂದಗತಿಯ ಪ್ರಗತಿಯ ಬಗ್ಗೆ ಕಾರಣಗಳನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಗುತ್ತಿಗೆದಾರರು ತಪ್ಪಿದ್ದಲ್ಲಿ (liquidated damages)ಅನ್ನು ವಿಧಿಸಬಹುದೆಂದು ಅನುಷ್ಠಾನಗೊಳಿಸುತ್ತಿಲಾಗುತ್ತಿದೆ. ವಿಭಾಗದವರು ತಪ್ಪಿದಲ್ಲಿ (ಭೂ ಸ್ವಾಧೀನ, ಇತರೆ) ಗುತ್ತಿಗೆದಾರರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿಲ್ಲ. ನಿಗಧಿತ ಅವಧಿಯಲ್ಲಿ ಪ್ರಗತಿಯನ್ನು ಪರಿಶೀಲಿಸುತ್ತಿದ್ದು, ಎಲ್ಲಾ ಕಾಮಗಾರಿಗಳು ಜೂನ್ 2002ರೊಳಗೆ ಮುಗಿಯುವ ಸಾಧ್ಯತೆ ಇದೆ.

4. ಸದರಿ ಯೋಜನೆಯಡಿಯಲ್ಲಿ ನೀರು ಸರಬರಾಜು, ಒಳಚರಂಡಿ, ರಸ್ತೆಗಳು, ಘನತ್ಯಾಜ್ಯ ವಸ್ತುಗಳ ವಿಲೇವಾರಿ, ಕೊಳಚೆ ಪ್ರದೇಶಾಭಿವೃದ್ಧಿ, ಕಡಿಮೆ ವೆಚ್ಚ ಶೌಚಾಲಯಗಳು, ಟ್ರಕ್ ಟರ್ಮಿನಲ್, ವಸತಿ ಕೈಗಾರಿಕೆ ನಿವೇಶನಗಳು ಇತ್ಯಾದಿ ಕಾಮಗಾರಿಗಳನ್ನು ರೂ. 6202.10 ಲಕ್ಷ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ.

5. ಈ ಯೋಜನೆಗಳಲ್ಲಿ ನೀಡಿರುವ ಹಣ ಸಾಲ ಮತ್ತು ಅನುದಾನದ ರೂಪದಲ್ಲಿ ಬರುತ್ತದೆ. ಯೋಜನೆಯ ಅನುಷ್ಠಾನ 5 ವರ್ಷದ ಅವಧಿಯಾಗಿದ್ದು ವಸತಿ ಮತ್ತು ಕೈಗಾರಿಕಾ ನಿವೇಶನ ಮತ್ತು ಟ್ರಕ್ ಟರ್ಮಿನಲ್‌ಗಳಿಗೆ ಸಾಲ ಮರುಪಾವತಿಸಲು 5 ವರ್ಷಗಳನ್ನು ನೀಡಲಾಗಿದ್ದು ಮಿಕ್ಕ ಕಾಮಗಾರಿಗಳಿಗೆ ಸಾಲ ಮರುಪಾವತಿಸಲು 25 ವರ್ಷಗಳನ್ನು ನೀಡಲಾಗಿದೆ. (5 ವರ್ಷ moratorium) ಅವಧಿ ಸೇರಿದ್ದು) 1 ಜೂನ್ ೨೦೦೧ ರಿಂದ ಸಾಲ ಮರುಪಾವತಿ ಪ್ರಾರಂಭವಾಗುವುದು. ಅವಧಿ ಒಟ್ಟಾರೆ 25 ವರ್ಷದ್ದಾಗಿರುತ್ತದೆ. ಸಾಲ ಮರುಪಾವತಿಗೆ ಸ್ಥಳೀಯ ಸಂಸ್ಥೆಗಳು ನಿರ್ವಹಣಾ ಕ್ರಿಯಾ ಯೋಜನೆಯನ್ನು (ಮ್ಯಾನೇಜ್‌ಮೆಂಟ್ ಆಕ್ಷನ್ ಪ್ಲಾನ್) ರೂಪಿಸಿಕೊಳ್ಳುತ್ತಿವೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಘಟಕಗಳು.

3432(4503) ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕಾ ಘಟಕಗಳಿವೆ

ಆ) ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಿವೆ

ಇ) ಸಣ್ಣ ಕೈಗಾರಿಕೆಗಳಿಗೆ ಆಗುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) 2,58,022 (ದಿನಾಂಕ 31-8-2000ರ ವರೆಗೆ)

ಆ) 155 ಕೈಗಾರಿಕಾ ವಸಾಹತುಗಳಿವೆ.

ಇ) ಗಮನಕ್ಕೆ ಬಂದಿದೆ. ನಿವಾರಣೆಗೋಸ್ಕರ ಸೂಕ್ತ ಕ್ರಮಕ್ಕಾಗಿ ವರದಿ ಪಡೆದು ಕ್ರಮ ಜರುಗಿಸಲಾಗುವುದು.

ವಸತಿ ನಿಲಯಗಳು.

3433(4316) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ 1999-2000, 2000-2001 ನೇ ಸಾಲುಗಳಲ್ಲಿ ಮಂಜೂರಾದ ಮೆಟ್ರಿಕ್-ಪೂರ್ವ ಬಾಲಕ ಬಾಲಕಿಯರ ವಸತಿನಿಲಯಗಳ ಸಂಖ್ಯೆ ಎಷ್ಟು ;

ಆ) ರಾಜ್ಯದಲ್ಲಿ ಮೆಟ್ರಿಕ್-ಪೂರ್ವ ಮೆಟ್ರಿಕ್ ನಂತರದ ವಸತಿ ನಿಲಯಕ್ಕೆ ಖರ್ಚು ಮಾಡುವ ಹಣವೆಷ್ಟು ; (ಜಿಲ್ಲಾವಾರು ವಿವರ)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ಇರುವ ವಸತಿ ನಿಲಯಗಳ ಸಂಖ್ಯೆ ಎಷ್ಟು ಅವುಗಳಿಗೆ ಖರ್ಚು ಮಾಡುವ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡಿರಿ)

ಈ) ಉತ್ತರ ಕನ್ನಡ ಜಿಲ್ಲೆಯಿಂದ ಎಲ್ಲೆಲ್ಲಿ ವಸತಿ ನಿಲಯ ತೆರೆಯಲು ಪ್ರಸ್ತಾವನೆ ಬಂದಿದೆ? (ತಾಲ್ಲೂಕುವಾರು ವಿವರ)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) 1999-2000 ಮತ್ತು 2000-2001ನೇ ಸಾಲುಗಳಲ್ಲಿ ಮಂಜೂರಾದ ಮೆಟ್ರಿಕ್-ಪೂರ್ವ ಬಾಲಕ ಬಾಲಕಿಯರ ವಸತಿ ನಿಲಯಗಳ ವಿವರ ಈ ಕೆಳಕಂಡಂತಿದೆ

ವರ್ಷ	ಮೆಟ್ರಿಕ್‌ಪೂರ್ವ ಬಾಲಕರು	ಮೆಟ್ರಿಕ್‌ಪೂರ್ವ ಬಾಲಕಿಯರು
ಸಮಾಜ ಕಲ್ಯಾಣ ಇಲಾಖೆ		
1999-2000	16	4
2000-2001	17	8